ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—3 ಲಕ್ಷ 80 ಸಾವಿರ ರೂಪಾಯಿ ವ್ಯವಹಾರ ಮಾಡುವುದಕ್ಕೆ ಎಷ್ಟು ಹಣ ಖರ್ಚುಮಾಡಿದ್ದೀರಿ ? ಎಕ್ಸ್‌ಪೆಂಡಿಚರ್ ಆನ್ ಸ್ಟ್ಯಾಫ್ ತಾವು ನೋಡಿ, ಇದು ಜಾಣ ತನವೇ ?

ಶ್ರೀ ಬಿ. ರಾಚಯ್ಯ.—ಸ್ವಾಮಿ, ನಾ ಮಿರ್ ವರ್ಕರ್ಸ್‌ಗೆ ಪ್ರತಿ ಸಾರಿ ಅಸೆಂಬ್ಲಿಯಲ್ಲಿ 5-5 ರೂಪಾಯಿ ಹೆಚ್ಚಿಸುತ್ತಾ ಹೋಗುತ್ತೀರಿ. 20 ರೂಪಾಯಿನ ವರ್ಕರ್ಸ್‌ಗೆ ಜಾಸ್ತಿ ಆಗಿದೆ. ಒಂದು ಕಡೆ ಸಂಬಳ ಹೆಚ್ಚಿಸಬೇಡಿ ಎಂದು ಹೇಳುತ್ತೀರಿ ಇನ್ನೊಂದು ಕಡೆ ಕಡಿಮೆ ಮಾಡಬೇಡಿ ಎಂದು ಹೇಳುತ್ತೀರಿ. ಇಲ್ಲ 83 ಜನ ವರ್ಕರ್ಸ್ ಇದ್ದಾರೆ. ಮಿನಿಮಮ್ ಸ್ಟಾಫ್ ಇಟ್ಟು ಕೊಂಡಿದ್ದೇವೆ.

———

Social Welfare Centres in the State.

*Q.—419. Sri B. H. LAKSHMANAIAH (Belur).—

Will the Government be pleased to state :—

(*a*) the number of Social Welfare Centres constructed in the State by the State Social Welfare Department ;

(*b*) whether annual repair works of these buildings are being done every year ;

(*c*) if so, by which Department ?

A.—Sri VEERENDRA PATIL (Minister for Public Works [On behalf of SRI S. NIJALINGAPPA (Chief Minister)].—

(*a*) Nil.

(*b*) and (*c*) Do not arise in view of the reply to clause (*a*) above.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ. —ಸಮಾಜ ಕಲ್ಯಾಣ ಕೇಂದ್ರಗಳನ್ನು ನಡೆಸುವುದಕ್ಕೆ ಬಿಲ್ಡಿಂಗ್‌ನ್ನು ಸರ್ಕಾರದವರು ಕಟ್ಟಲಿಲ್ಲ ಎಂದು ಹೇಳಿದಿರಿ. ರಾಜ್ಯದ ಅನೇಕ ಕಡೆಗಳಲ್ಲಿ ಹಿಂದೆ ಸಮಾಜ ಕಲ್ಯಾಣ ಇಲಾಖೆಯವರು ಲಂಪ್‌ಸಂ ಗ್ರಾಂಟ್ ಕೊಟ್ಟು ಸ್ಥಳದ ಜನರಿಂದ ಚಂದಾ ವಸೂಲು ಮಾಡಿ ಗ್ರಾಮಸ್ಥರು ಕಟ್ಟಿರುವ ರಾಮಮಂದಿರವನ್ನು ಸಮಾಜ ಕಲ್ಯಾಣ ಕೇಂದ್ರಕ್ಕಾಗಿ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳಿದ ಸೋಷಿಯಲ್ ವೆಲ್‌ಫೇರ್ ಕೆಂದ್ರಗಳು ಇಂತಹ ಸೋಷಿಯಲ್ ವೆಲ್‌ಫೇರ್ ಪ್ರೋಗ್ರಾಮ್ಸ್‌ನಲ್ಲಿ ಇಲ್ಲ. ಅವರು ಹೇಳುವಂಥಾದ್ದು ಕಮ್ಯೂನಿಟಿ ಸೆಂಟರ್ಸ್ ಬಿಲ್ಡಿಂಗ್ ಇರಬೇಕು. ಕಮ್ಯೂನಿಟಿ ಸೆಂಟರ್ಸ್ ಬಿಲ್ಡಿಂಗ್ ಮಾಡುವುದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಕಾರ್ಯಕ್ರಮದಲ್ಲಿ ಇದೆ. 2 ಮತ್ತು 3ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಈ ತರಹ ಕಟ್ಟಡಗಳನ್ನು ಕಟ್ಟಿಸಿದ್ದೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸ್ವಾಮಿ, ನಾನು ಸೋಷಿಯಲ್ ವೆಲ್‌ಫೇರ್ ಸೆಂಟರ್ಸ್ ಕೇಳಲಿಲ್ಲ. ನಾನು ಕೇಳಿರುವುದು ಸಮಾಜ ಕಲ್ಯಾಣ ಇಲಾಖೆಯವರು ಶಿಶುವಿಹಾರಗಳನ್ನು ನಡೆಸುತಕ್ಕ ಕೇಂದ್ರಗಳಲ್ಲಿ ಎಷ್ಟು ಸರ್ಕಾರಿ ಕಟ್ಟಡಗಳು ಇವೆ ಎಂದು. ಈಗ ಸ್ಥಳೀಯ ಜನರು ಸರ್ಕಾರಿ ಸಹಾಯದಿಂದ ಕಟ್ಟಿರತಕ್ಕ ಬಿಲ್ಡಿಂಗ್‌ಗಳಿಗೆ ಎರಡು ವರ್ಷದಿಂದ ಹಣ ಕೊಡದೆ ಬಹಳ ದುಸ್ಥಿತಿ ಯಲ್ಲಿದೆ. ಅವುಗಳನ್ನು ರಿಪೇರಿ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಮುಂದೆ ಪ್ರಶ್ನೆ ಇರುವುದು Social Welfare Centres constructed in the State. ಸೋಷಿಯಲ್ ವೆಲ್‌ಫೇರ್ ಸೆಂಟರ್ಸ್ ಇಲ್ಲ. ಕಮ್ಯೂನಿಟಿ ಸೆಂಟರ್ಸ್ ಬಿಲ್ಡಿಂಗ್ ಕಟ್ಟಿದ್ದೇವೆ. ಅದರ ಬಗ್ಗೆ ಉಪ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

Sri G. V. GOWDA.—May I know whether the annual repairs for these community buildings have been attended to ? If so, which is the agency ?

Sri VEERENDRA PATIL.—There is no provision. It is expected that the community will take care of the buildings and maintain them. They will be made over to them and they will maintain the buildings. That was expected of them. But they are not maintaining the buildings with the result that some of the buildings are not in good condition.

1-30 P.M.

Sri G. V. GOWDA.—Made over to whom, Sir ?

Mr. SPEAKER.—Made over to the community—to persons who are managing it.

Sri VEERENDRA PATIL.—The original proposal was only to construct the building and the residents of the village should maintain it. But now we have found that the community is not in a position to maintain. So, there is a proposal to give grant-in-aid in favour of the taluk board. The proposal is to give at the rate of Rs. 3,650 in which case the responsibility for maintenance will be of the taluk board. That is the proposal that is now under consideration.

Mr. SPEAKER.—I have got the original question sent by Sri Lakshmaniah. Does the Member think there is anything wrong in translation ? He has used the expression ' Samaja kalyana '

Sri B. H. LAKSHMANIAH.—It is correct, Sir.

Mr. SPEAKER.—Because I wanted to make sure that there is no mistake on the part of the Office.

Sri VEERENDRA PATIL.—If the Hon'ble Member wants information in respect of Sishuvihar, let him put a separate Question. I will furnish information.

Mr. SPEAKER.—The Member may please give notice of another Question. He will get the answer.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ.—ಅವರು ಹೇಳುವ ಪ್ರಕಾರ ಆ ತರಹ ಬಿಲ್ಡಿಂಗುಗಳಿವೆ, ಅದನ್ನು ಯಾರ ವಶಕ್ಕೆ ಕೊಟ್ಟಿದ್ದೀರಿ ? ಅದನ್ನು ಯಾರು ಮೆಂಟೇನ್ ಮಾಡುತ್ತಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—2ನೇ ಪ್ಲಾನಿನಲ್ಲಿ 371 ಮತ್ತು 3ನೇ ಪ್ಲಾನ್‌ನಲ್ಲಿ 311 ಕಟ್ಟಡಗಳನ್ನು ಕಟ್ಟಿದ್ದೇವೆ. ಕಟ್ಟಡವನ್ನು ನೋಡುಕೊಳ್ಳುವುದಕ್ಕೆ ಯಾರೂ ಮುಂದೆ ಬರುತ್ತಾ ಇಲ್ಲ. ಕಟ್ಟಡಗಳ ಸ್ಥಿತಿ ಚೆನ್ನಾಗಿಲ್ಲ. ಆದ್ದರಿಂದ ಆ ಸ್ಕೀಂ ಕೊಂಚ ಬದಲಾವಣೆ ಮಾಡಿ, ಇನ್ನು ಮುಂದೆ lumpsum ಗ್ರಾಂಟನ್ನು ತಾಲೂಕ ಬೋರ್ಡಿಗೆ ಕೆಡಬೇಕೆನ್ನುವ ಪ್ರೊಪೋಸಲ್ ಸರ್ಕಾರದ ಮುಂದೆ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸಮಾಜ ಕಲ್ಯಾಣ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಾ ಇಲ್ಲ. ಆದುದರಿಂದ ಮೈಸೂರು ಸ್ಟೇಟ್ ಸಮಾಜ ಕಲ್ಯಾಣ ಶಾಖೆಗೆ ಶ್ರೀಮತಿ ಸುಶೀಲಾಬಾಯಿ ಷಾ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತೀರಾ ?

Mr. SPEAKER.—The last portion is disallowed. He has no right to give suggestions. He can only ask for information.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಈ ಕಟ್ಟಡಗಳನ್ನು ನಡೆಸಿಕೊಂಡು ಬರುವುದಕ್ಕೆ ಒಂದು ಸ್ಥಳೀಯ ಸಂಸ್ಥೆಗೆ ವಹಿಸಿ ಕೊಡುತ್ತೀರಾ ಅಥವಾ ಸರ್ಕಾರದವರೇ ಕಟ್ಟಡಗಳನ್ನು ನೋಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ತಿಳಿಸಿದ್ದೇನೆ. ಆ ಸ್ಥಳದ ಜನಗಳು ಅಪ್ಪಾಗಿ ಮುಂದೆ ಬರುತ್ತಿಲ್ಲ. ಆದ್ದರಿಂದ ಕಟ್ಟಡಗಳನ್ನು ಎಲ್ಲಾ ಉಪೇಕ್ಷೆ ಮಾಡಿದ್ದಾರೆ. ಆದ್ದರಿಂದ ಇನ್ನು ಮುಂದೆ ನಾವು ಹಣವನ್ನು ತಾಲ್ಲೂಕು ಬೋರ್ಡಿಗೆ ಕೊಟ್ಟು ಅವರು ಬಿಲ್ಡಿಂಗ್ಸ್ ಕಟ್ಟಿ ಅದರ ಮೈಂಟೆನೆನ್ಸ್ ನೋಡಿಕೊಳ್ಳುವ ಹಾಗೆ ವ್ಯವಸ್ಥೆ ಮಾಡುತ್ತೇನೆ. ಈ ತರಹ ಪ್ರೊಪೋಸರ್ ಸರ್ಕಾರದ ಮುಂದೆ ಇದೆ.

Sri SIDDIAH KASIMATH.—May I know how many community development centres are there in the State ?

Sri VEERENDRA PATIL.—The community centres in the Social Welfare Departments I said during the second plan total number is 371 and under third plan, 311.

Smt. VIJAYA RAGHAVENDRA RAO DESAI.—Community Centres are different. We would like to know about the construction by the Central Social Welfare Board.

Sri VEERENDRA PATIL.—If the Hon'ble Member puts a separate question, I will furnish the answer. I have already said that.

ಶ್ರೀ ಕೆ. ಪಿ. ರೇವಣ ಸಿದ್ಧಪ್ಪ.—ಸೆಂಟರುಗಳನ್ನು ಕಟ್ಟಿಸಿದ ಉದ್ದೇಶವೇನು, ಮತ್ತು ಈ ಕಟ್ಟಡಗಳಲ್ಲಿ ಜೂಜು ವಗೈರೆ ನಡೆಯುತ್ತಾ ಇರತಕ್ಕಂತದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಯಾವ ಕಟ್ಟಡ ನೀವು ಹೇಳುತ್ತಾ ಇರುವುದು ?

ಶ್ರೀ ಕೆ. ಪಿ. ರೇವಣ ಸಿದ್ಧಪ್ಪ.—ನಮ್ಮ ತಾಲ್ಲೂಕಿನಲ್ಲಿ 7-8 ಅಂಥ ಕಟ್ಟಡಗಳಿವೆ. ಅದರ ಹೆಸರು ಕಮ್ಯುನಿಟಿ ಸೆಂಟರ್ ಬಿಲ್ಡಿಂಗ್ ಎಂದು. ನಮ್ಮ ಗ್ರಾಮದಲ್ಲೂ ಒಂದು ಇದೆ.

Sri M. V. KRISHNAPPA.—Question No. 459 and 460 may be taken together.

Mr. SPEAKER.—Question No. 459 and 460 may be taken together.

———

Report of the Central Study Team regarding Scarcity Conditions in the State.

*Q.—459. Sri A. J. DODDAMETI (Ron).—

Will the Government be pleased to state :—

(*a*) whether they have received any report from the Central Study Team set up under the chairmanship of Sri Yardi, with regard to the scarcity conditions prevailing in the State, and the relief measures to be taken ;

(*b*) if so, the details of the report ?

A.—Sri M. V. KRISHNAPPA (Minister for Revenue).—

(*a*) No.

(*b*) Does not arise.

———